# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **:** | **504** |
| **ಮಾನ್ಯ ಸದಸ್ಯರ ಹೆಸರು** | **:** | **ಶ್ರೀ. ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು)** |
| **ಉತ್ತರಿಸುವ ದಿನಾಂಕ** | **:** | **20.08.2026** |
| **ಉತ್ತರಿಸುವ ಸಚಿವರು** | **:** | **ಗೃಹ ಸಚಿವರು** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇತ್ತೀಚಿನ ದಿನಗಳಲ್ಲಿ ಸ್ಯೆಬರ್ ಅಪರಾಧಗಳು ವ್ಯಾಪಕವಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು); | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇತ್ತೀಚಿನ ದಿನಗಳಲ್ಲಿ ಸ್ಯೆಬರ್ ಅಪರಾಧಗಳು ವ್ಯಾಪಕವಾಗಿ ನಡೆಯುತ್ತಿದ್ದು, ಇದಕ್ಕೆ ಸಂಬಂಧಿಸಿದಂತೆ ದೂರುಗಳು ಸ್ವೀಕೃತವಾದ ಕೂಡಲೇ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗುತ್ತಿದೆ.<br>**ದಕ್ಷಿಣ ಕನ್ನಡ ಜಿಲ್ಲೆ** ಮತ್ತು **ಮಂಗಳೂರು ನಗರ** ಸೇರಿದಂತೆ ಕಳೆದ ಮೂರು ವರ್ಷಗಳಲ್ಲಿ ದಾಖಲಾದ ಸ್ಯೆಬರ್ ಅಪರಾಧ ಪ್ರಕರಣಗಳ ವಿವರಗಳು ಈ ಕೆಳಗಿನಂತಿದೆ:-<br><br>**ವರ್ಷ** / **ದಕ್ಷಿಣ ಕನ್ನಡ ಜಿಲ್ಲೆ** / **ಮಂಗಳೂರು ನಗರ**<br>2024 / 95 / 137<br>2025 / 129 / 123<br>2026 (31 ಜುಲೈ ವರೆಗೆ) / 50 / 59 |
| ಆ | ಸ್ಯೆಬರ್ ಅಪರಾಧಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | **ಸ್ಯೆಬರ್ ಅಪರಾಧಗಳನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳ ವಿವರಗಳು ಈ ಕೆಳಗಿನಂತಿದೆ:-**<br><br>• ಕರ್ನಾಟಕ ರಾಜ್ಯದಲ್ಲಿ ಸ್ಯೆಬರ್ ಅಪರಾಧಗಳು ಹೆಚ್ಚಾಗುತ್ತಿದ್ದು, ರಾಜ್ಯದಲ್ಲಿ ಹೆಚ್ಚಾಗುತ್ತಿರುವ ಸ್ಯೆಬರ್ ಅಪರಾಧ ಪ್ರಕರಣಗಳನ್ನು ಸಮರ್ಪಕವಾಗಿ ತಡೆಯಲು ಮತ್ತು ತನಿಖೆಯನ್ನು ನಡೆಸಿ ನೊಂದವರಿಗೆ ಸಹಾಯ ಮಾಡುವ ನಿಟ್ಟಿನಲ್ಲಿ ಭಾರತದಲ್ಲಿಯೇ ಮೊದಲನೇ ಬಾರಿಗೆ ಕರ್ನಾಟಕ ರಾಜ್ಯದಲ್ಲಿ |

| | | |
|---|---|---|
| | | ಹೊಸದಾಗಿ ಸೈಬರ್ ಕಮಾಂಡ್ (Cyber Command Wing) ಘಟಕವನ್ನು ಡಿಜಿಪಿ, ಸೈಬರ್ ಕಮಾಂಡ್ ರವರ ನೇತೃತ್ವದಲ್ಲಿ ಸೃಜಿಸಲಾಗಿರುತ್ತದೆ. ಕರ್ನಾಟಕ ಸೈಬರ್ ಕಮಾಂಡ್ ಘಟಕದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿಗಳ ಪೈಕಿ ಡಿಜಿಪಿ, ಸೈಬರ್ ಕಮಾಂಡ್, ಎಡಿಜಿಪಿ, ಸೈಬರ್ ಕಮಾಂಡ್, ಡಿಐಜಿಪಿ, ಸೈಬರ್ ಕಮಾಂಡ್, ಮತ್ತು ಮೂವರು ಪೊಲೀಸ್ ಅಧೀಕ್ಷಕರುಗಳಾದ 1) ಎಸ್‌ಪಿ, ಸಿಸಿಡಿ, 2) ಎಸ್‌ಪಿ ಸಿಟಿ&ಆರ್, 3) ಎಸ್‌ಪಿ ವಿಶೇಷ ಸೈಬರ್ ಕೋಶ (Cyber Special Cell) ಹುದ್ದೆಯನ್ನು ಮರು ನಾಮೀಕರಿಸಿ ಎಸ್‌ಪಿ ವಿಶೇಷ ಕೋಶವೆಂದು ಮತ್ತು ರಾಜ್ಯಾದ್ಯಂತ ಇರುವ 45 ಸೈಬರ್ ಕ್ರೈಂ ಪೊಲೀಸ್ ಠಾಣೆಗಳಿಗೆ ಅದರ ಮೇಲ್ವಿಚಾರಕರಾಗಿ ಸಂಬಂಧಪಟ್ಟ ವಲಯಗಳಲ್ಲಿ ಕೇಂದ್ರ ಸ್ಥಾನದಲ್ಲಿರುವ ಪೊಲೀಸ್ ಅಧೀಕ್ಷಕರುಗಳನ್ನು ಲಿಂಕ್ ಅಧಿಕಾರಿಗಳನ್ನಾಗಿ ನಿಯೋಜಿಸಲಾಗಿರುತ್ತದೆ.<br><br>• ಭಾರತ ಸರ್ಕಾರದ ಗೃಹ ವ್ಯವಹಾರಗಳ ಸಚಿವಾಲಯದ (MHA) ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಇಂಡಿಯನ್ ಸೈಬರ್ ಕ್ರೈಂ ಕೋಆರ್ಡಿನೇಷನ್ ಸೆಂಟರ್ (I4C) ಮಾದರಿಯಲ್ಲಿ, ರಾಜ್ಯ ಮಟ್ಟದಲ್ಲಿ ಸೈಬರ್ ಅಪರಾಧಗಳ ನಿಯಂತ್ರಣ, ತಡೆಗಟ್ಟುವಿಕೆ, ತನಿಖೆ ಹಾಗೂ ಸೈಬರ್ ಭದ್ರತೆಯನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಕರ್ನಾಟಕ ಸೈಬರ್ ಕಮಾಂಡ್ ಸೆಂಟರ್ (K4C) ಸ್ಥಾಪಿಸುವ ಕುರಿತು ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ.<br><br>• ಕೆ-ಸಿಇಆರ್‌ಟಿ (K-CERT) ಕೇಂದ್ರವನ್ನು ಇತ್ತೀಚೆಗೆ ಅಧಿಸೂಚನೆ ಮೂಲಕ ಸ್ಥಾಪಿಸಲಾಗಿದೆ.<br><br>• ಮಹಿಳಾ ಮತ್ತು ಮಕ್ಕಳ ಸೈಬರ್ ಸುರಕ್ಷತಾ ದಳವನ್ನು, ಗೃಹ ವ್ಯವಹಾರಗಳ ಸಚಿವಾಲಯದ (MAH) OCPW ಮಾದರಿಯಲ್ಲಿ ರಚಿಸಲಾಗಿದೆ.<br><br>• ಸೈಬರ್ ಅಪರಾಧಗಳನ್ನು ತಡೆಗಟ್ಟುವ ಸಲುವಾಗಿ ಕರ್ನಾಟಕ ರಾಜ್ಯಾದ್ಯಂತ ಕಾರ್ಯನಿರ್ವಹಿಸುತ್ತಿರುವ ಸಿ.ಸಿ.ಪಿ.ಎಸ್ |

| | | |
|---|---|---|
| | | ಪೊಲೀಸ್ ಠಾಣೆಗಳನ್ನು ಅತಿ ನಿಕಟವಾಗಿ ಮೇಲ್ವಿಚಾರಣೆ ಮಾಡಲು ಪ್ರತ್ಯೇಕ ಪೊಲೀಸ್ ಮಹಾನಿರ್ದೇಶಕರು, ಸೈಬರ್ ಕಮಾಂಡ್, ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ಸೈಬರ್ ಕಮಾಂಡ್ ಮತ್ತು ಪೊಲೀಸ್ ಉಪ ಮಹಾನಿರೀಕ್ಷಕರು, ಸೈಬರ್ ಕಮಾಂಡ್, ಹುದ್ದೆಯನ್ನು ಸೃಜನೆ ಮಾಡಿ, ಹಿರಿಯ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸಲು ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.<br>• ಸಿಸಿಯು ಘಟಕದ ಸೈಬರ್ ಕ್ರೈಂ ವಿಭಾಗದಲ್ಲಿ ಡಾರ್ಕ್ ವೆಬ್ ಮಾನಿಟರಿಂಗ್ ಟೂಲ್‌ನ ಲೈಸೆನ್ಸ್ ಅವಧಿ ಮುಗಿದಿರುವುದರಿಂದ, ಸೈಬರ್ ಕಮಾಂಡ್ ಹೊಸದಾಗಿ ಖರೀದಿ (Fresh Procurement) ಪ್ರಕ್ರಿಯೆಯು ನಿರೀಕ್ಷಣೆಯಲ್ಲಿದೆ.<br>• ಪ್ರತಿ ಜಿಲ್ಲೆಯಲ್ಲಿ ಹಾಗೂ ನಗರ ವ್ಯಾಪ್ತಿಯಲ್ಲಿ ಒಂದೊಂದು ಸೈಬರ್ ಪೊಲೀಸ್ ಠಾಣೆಗಳನ್ನು (ಸಿ.ಸಿ.ಪಿ.ಎಸ್ ಪೊಲೀಸ್ ಠಾಣೆ) ತೆರೆಯಲಾಗಿರುತ್ತದೆ. ಅಲ್ಲದೆ ಪ್ರತಿ ಠಾಣೆಗಳಲ್ಲಿಯೂ ಸಹ ದೂರನ್ನು ಸ್ವೀಕರಿಸುವಂತೆ ಸೂಕ್ತ ಕ್ರಮ ಕೈಗೊಳ್ಳಲಾಗಿದೆ. ಸೈಬರ್ ಅಪರಾಧಗಳನ್ನು ತಡೆಗಟ್ಟುವ ಸಲುವಾಗಿ ಸಿಐಡಿ ಕಛೇರಿಯಲ್ಲಿ Centre for Cyber crime Investigation & Digital Forensic Training & Research" ಘಟಕವನ್ನು ಪ್ರಾರಂಭಿಸಲಾಗಿದ್ದು, Data Security Council of India ರವರ ಸಹಯೋಗದೊಂದಿಗೆ ವಿಶೇಷ ಸೈಬರ್ ಪೊಲೀಸ್ ಠಾಣೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ವಿಶೇಷ ತರಬೇತಿಯನ್ನು ನೀಡಲಾಗುತ್ತಿದೆ. ಬ್ಯಾಂಕಿಂಗ್ ಅಪರಾಧಗಳಿಗೆ ಸಂಬಂಧಿಸಿದಂತೆ ಆರ್.ಬಿ.ಐ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು ಹಾಗೂ ಬ್ಯಾಂಕ್ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಬ್ಯಾಂಕಿಂಗ್ ಹಾಗೂ ಇತರೆ ಸೈಬರ್ ಅಪರಾಧಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಹಲವು ಪರಿಣಾಮಕಾರಿ ಸುರಕ್ಷತಾ ಕ್ರಮಗಳನ್ನು ಅನುಸರಿಸಿ ಸಾರ್ವಜನಿಕರ ಹಿತ ಕಾಪಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. |

| | | |
|---|---|---|
| | | • ರಾಜ್ಯದ ಎಲ್ಲಾ ಟೆಲಿಕಾಮ್ ಸೇವಾದಾರರನ್ನು (TSP) ಸಂಪರ್ಕಿಸಿ ಅವರ ಗ್ರಾಹಕರಿಗೆ ಬ್ಯಾಂಕಿಂಗ್ ಡಿಟೇಲ್ಸ್ ಮತ್ತು ಪಾಸ್‌ವರ್ಡನ್ನು ಯಾರಿಗೂ ನೀಡಬಾರದೆಂದು ಸಮೂಹ ಸಂದೇಶಗಳನ್ನು (Group Messages) ರವಾನಿಸುವ ಮೂಲಕ ಸಾರ್ವಜನಿಕ ಗ್ರಾಹಕರಿಗೆ ಜಾಗೃತಿ ಮೂಡಿಸಲಾಗಿರುತ್ತದೆ.<br><br>• ಸಿಐಡಿ ಕಛೇರಿಯ ಸಿಸಿಐಟಿಆರ್ ವಿಭಾಗದಲ್ಲಿ ಕಳೆದ ಹಲವು ವರ್ಷಗಳಿಂದ ಮಿಲಿಟರಿ, ಬ್ಯಾಂಕಿಂಗ್ ಸೆಕ್ಟರ್, ಸರ್ಕಾರಿ ಸಂಸ್ಥೆಗಳು, ನ್ಯಾಯಾಂಗದ ಅಭಿಯೋಜಕರಿಗೆ, ಪೊಲೀಸ್ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಯವರುಗಳಿಗೆ ಸೈಬರ್‌ಕ್ರೈಂ ಅಪರಾಧಗಳನ್ನು ತಡೆಗಟ್ಟುವ ಬಗ್ಗೆ, ತನಿಖೆ ಮತ್ತು ಪತ್ತೆ ಮಾಡುವ ಬಗ್ಗೆ ತರಬೇತಿಯನ್ನು ನೀಡಲಾಗಿರುತ್ತದೆ.<br><br>• ಸೈಬರ್ ಕ್ರೈಂ ಅಪರಾಧದ ಬಗ್ಗೆ ಸಾರ್ವಜನಿಕರಲ್ಲಿ ತಿಳುವಳಿಕೆ ಮೂಡಿಸುವ ಸಲುವಾಗಿ ಮುದ್ರಣ ಮಾಧ್ಯಮಗಳ (Print Media)ಮೂಲಕ ವರದಿಗಳನ್ನು ಪ್ರಕಟಿಸುವುದರ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ. ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ವಾಟ್ಸ್‌ಆಪ್ ಹಾಗೂ ಟ್ವೀಟರ್‌ಗಳ ಮೂಲಕ ಸೈಬರ್ ಜಾಗೃತಿಯ ಸಂದೇಶಗಳನ್ನು ರವಾನಿಸುವ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ನೀಡಲಾಗುತ್ತಿದೆ. ಸೈಬರ್ ಜಾಗೃತಿ ಸಪ್ತಾಹವನ್ನು ಆಚರಿಸುವ ಮೂಲಕ ಕರಪತ್ರಗಳನ್ನು ಮುದ್ರಿಸಿ ಶಾಲಾ ಕಾಲೇಜುಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ಸೈಬರ್ ಅಪರಾಧಗಳನ್ನು ತಡೆಗಟ್ಟುವ ಬಗ್ಗೆ ಅರಿವನ್ನು ಮೂಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>• ಕೇಂದ್ರ ಸರ್ಕಾರದ ಗೃಹ ಮಂತ್ರಾಲಯವು ಆರ್ಥಿಕ ಸ್ವರೂಪದ ಸೈಬರ್ ಅಪರಾಧವನ್ನು ತಡೆಗಟ್ಟಲು ಉಚಿತ ಸಹಾಯವಾಣಿ (ಟೋಲ್ ಫ್ರೀ) ಸಂ: 1930 ಸೇವೆಯನ್ನು ಪ್ರಾರಂಭಿಸಿರುತ್ತದೆ. ಕರ್ನಾಟಕ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಗೃಹ ಮಂತ್ರಾಲಯದ ಒಡಂಬಡಿಕೆಯೊಂದಿಗೆ ಉಚಿತ ಸಹಾಯವಾಣಿ ಸಂಖ್ಯೆ 112 ಗೆ ಕರೆ ಮಾಡಿ ದೂರು ದಾಖಲಿಸುವ ಹಾಗೂ ವಂಚನೆಗೆ |

<table>
<tr><td></td><td></td><td>ಬಳಕೆಯಾಗುವ ಬ್ಯಾಂಕ್ ಖಾತೆಗಳನ್ನು ತನಿಖೆಯ ಸಲುವಾಗಿ ತಾತ್ಕಾಲಿಕವಾಗಿ ಸ್ಥಗಿತಗೊಳಿಸುವ ಯೋಜನೆಯನ್ನು ಜಾರಿಗೆ ತರಲಾಗಿದೆ.</td></tr>
<tr><td>ಇ</td><td>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದಾಖಲಾಗಿರುವ ಪ್ರಕರಣಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು);</td><td>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತು ಮಂಗಳೂರು ನಗರದಲ್ಲಿ ಕಳೆದ ಮೂರು ವರ್ಷಗಳಲ್ಲಿ ದಾಖಲಾದ ಸೈಬರ್ ಅಪರಾಧ ಪ್ರಕರಣಗಳ ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ:<br><br>ದಕ್ಷಿಣ ಕನ್ನಡ ಜಿಲ್ಲೆ:
<table>
<tr><th>ತಾಲ್ಲೂಕು ಹೆಸರು</th><th>2024</th><th>2025</th><th>2026 (31 ಜುಲೈ ವರೆಗೆ)</th></tr>
<tr><td>ಬಂಟ್ವಾಳ</td><td>59</td><td>114</td><td>39</td></tr>
<tr><td>ಬೆಳ್ತಂಗಡಿ</td><td>18</td><td>1</td><td>1</td></tr>
<tr><td>ಪುತ್ತೂರು</td><td>14</td><td>14</td><td>8</td></tr>
<tr><td>ಕಡಬ</td><td>0</td><td>0</td><td>0</td></tr>
<tr><td>ಸುಳ್ಯ</td><td>4</td><td>0</td><td>2</td></tr>
<tr><td>ಒಟ್ಟು</td><td>95</td><td>129</td><td>50</td></tr>
</table>
<br>ಮಂಗಳೂರು ನಗರ:
<table>
<tr><th>ತಾಲ್ಲೂಕು ಹೆಸರು</th><th>2024</th><th>2025</th><th>2026 (31ಜುಲೈ ವರೆಗೆ)</th></tr>
<tr><td>ಮಂಗಳೂರು</td><td>124</td><td>110</td><td>56</td></tr>
<tr><td>ಮೂಡಬಿದ್ರೆ</td><td>2</td><td>1</td><td>0</td></tr>
<tr><td>ಮೂಲ್ಕಿ</td><td>5</td><td>1</td><td>1</td></tr>
<tr><td>ಉಳ್ಳಲಾ</td><td>6</td><td>11</td><td>2</td></tr>
<tr><td>ಒಟ್ಟು</td><td>137</td><td>123</td><td>59</td></tr>
</table></td></tr>
<tr><td>ಈ</td><td>ಇಲ್ಲಿಯವರೆಗೆ ಇದನ್ನು ನಿಯಂತ್ರಿಸಲು ತಾಂತ್ರಿಕವಾಗಿ ಸಶಕ್ತ ಪ್ರತ್ಯೇಕ ವಿಭಾಗಗಳನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?</td><td>ಸೈಬರ್ ಅಪರಾಧ ಪ್ರಕರಣಗಳ ತನಿಖೆಗಾಗಿ ಹಾಗೂ ತಡೆಗಟ್ಟಲು ಡಿ.ಜಿ.ಪಿ. ದರ್ಜೆಯ ಅಧಿಕಾರಿರವರ ನೇತೃತ್ವದಲ್ಲಿ ಸೈಬರ್ ಕಮಾಂಡ್ ಘಟಕವನ್ನು (ಸಿ.ಸಿ.ಯು) ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ/177/ಪಿಒಪಿ/2024, ದಿನಾಂಕ:09/04/2025 ರನ್ವಯ ಸ್ಥಾಪಿಸಲಾಗಿದೆ.<br><br>ಮುಂದುವರೆದು, ದಕ್ಷಿಣ ಕನ್ನಡ ಜಿಲ್ಲೆ ಒಳಗೊಂಡಂತೆ ಎಲ್ಲಾ ಜಿಲ್ಲಾ ಹಾಗೂ ನಗರ ಪೊಲೀಸ್ ಘಟಕಗಳ</td></tr>
</table>

| | | |
|---|---|---|
| | | ವ್ಯಾಪ್ತಿಯಲ್ಲಿ **ಡಿ.ಎಸ್.ಪಿ.** ದರ್ಜೆಯ ಅಧಿಕಾರಿಯವರ ನೇತೃತ್ವದಲ್ಲಿ ಸೈಬರ್ ಅಪರಾಧ ಪೊಲೀಸ್ ಠಾಣೆಗಳು ಕಾರ್ಯನಿರ್ವಹಿಸುತ್ತಿವೆ. |

**ಸಂಖ್ಯೆ: ಹೆಚ್‌ಡಿ 75 ಪಿಸಿಕ್ಯೂ 2026**

(ಪ್ರಿಯಾಂಕ್ ಖರ್ಗೆ)
ಗೃಹ ಸಚಿವರು